ಮಳ್ಳಜ್ಜನ ಮಾತುಗಳು ಹುಟ್ಟಿಸತೊಡಗಿದ ಥರಾವರಿ ಅರ್ಥಗಳು, ಅವುಗಳು ವಿಲೇವಾರಿ ಮಾಡತೊಡಗಿದ ದುಗುಡಗಳು, ಅಪ್ಪನ ಬಗೆಗಿನ ಅಪಶಕುನಗಳಂತೆ ಕಾಣುತ್ತಾ ಚಿಕ್ಕಸವನ ಮನಸು ಕುದಿವ ಮಡಕೆಯಂತಾಯ್ತು. ಅವತ್ತೊಂದು ದಿನ ಹೆಂಡತಿ ಹೇಳಿದ್ದ ಮಾತುಗಳು ನೆನಪಾದವು. ದೇವರ ಅಪ್ಪಣೆಗಾಗಿ ಕಾಯದೆ ವತಾರೆಗೆ ಎದ್ದು ಹೊರಡಬೇಕೆಂದು ತೀರ್ಮಾನಿಸಿಕೊಂಡ.

★★★

ಕಾಟ್ಮಾರಯ್ಯನಿಗೆ 'ಕಾಡ್ಕೋಳಿ' ಅನ್ನುವ ಅಡ್ಡೆಸರು ಬರಲು ಅವನಿಗಿದ್ದ ಕೋಳಿ ಸಾರಿನ ಹುಚ್ಚು ಕಾರಣವಾಗಿತ್ತಂತೆ. ಆದರೆ ಬೇಕೆಂದಾಗಲೆಲ್ಲಾ ಕೋಳಿ ಕುಯ್ಯುವಷ್ಟು ಗತಿವಂತನಾಗಿರಲಿಲ್ಲ. ಈ ಕಾರಣಕ್ಕೇ ಗಂಡಹೆಂಡಿರ ನಡುವೆ ಆಗಾಗ ಜಗಳವೂ ಆಗುತ್ತಿತ್ತಂತೆ. 'ತಿನ್ಲಿಲ್ಲ ಅಂದ್ರೆ ನಿನ್ ನಾಲ್ಗೆ ಬಿದ್ದೋಗುತ್ತ' ಅಂತ ಹೆಂಡತಿ ಸಣ್ಮಾದಮ್ಮ ರುಮುಗುಟ್ಟುತ್ತಿದ್ದಳಂತೆ. ಕಾಟ್ಮಾರಯ್ಯ ಅದಕ್ಕೆಲ್ಲಾ ಮೈಟ್ ಮಾಡುತ್ತಿರಲಿಲ್ಲವಂತೆ. ಕೋಳಿಯನ್ನು ಕಾಸು ಕೊಟ್ಟು ತಂದರೆ ತಾನೇ ಹೆಂಡತಿ ದುಮುಗುಟ್ಟೋದು, ಅಂತ ಬೇಕೆನಿಸಿದಾಗಲೆಲ್ಲಾ ನಾಲ್ಕೈದು ಮೈಲಿ ದೂರದ ಕಾಡಿಗೆ ಹೋಗಿ ದಿನವಿಡೀ ಕಾಡುಕೋಳಿಗಾಗಿ ಕಾಯುತ್ತಿದ್ದನಂತೆ. ಅಪರೂಪಕ್ಕೊಮ್ಮೆ ನಸೀಬು ಖುಲಾಯಿಸುತ್ತಿತ್ತಂತೆ. ಮಿಕ್ಕಂತೆ ಯಾಪೆ ಮಾರೆ ಹಾಕ್ಕಂಡು ಬರಿಗೈಯ್ಯಲ್ಲಿ ಹಿಂದಿರುಗುತ್ತಿದ್ದನಂತೆ. ಮಹಾ ಚುರುಕಿನ ಕಾಡುಕೋಳಿಗಳನ್ನು ಹಿಡಿಯುವುದು ಸುಲಭದ ಮಾತಾಗಿರಲಿಲ್ಲ. ಕಾಟ್ಮಾರಯ್ಯನಂತೆ ಸುಮಾರು ಮಂದಿ ಛಲಕ್ಕೆ ಬಿದ್ದರೂ ಅಪ್ಪಿತಪ್ಪಿ ಒಂದನ್ನೂ ಹಿಡಿಯಲಾಗದೆ ಹೋಗಿದ್ದರು. ಅವರನ್ನೆಲ್ಲಾ ಅವು ಕಡೇ ಕ್ಷಣಗಳಲ್ಲಿ ಪಿಗ್ಗಿ ಬೀಳಿಸುತ್ತಿದ್ದವಂತೆ. ಹಂಗಾಗಿ ಕಾಟ್ಮಾರಯ್ಯನ ಚಾಲಾಕುತನಕ್ಕೆ ಊರೇ ಬೆರಗಾಗಿ 'ಕಾಡ್ಕೋಳಿ' ಅನ್ನೋ ಅಡ್ಡೆಸರನ್ನು ಇಟ್ಟಿತ್ತಂತೆ.

★★★

